ಆಲೋಚಿಸುತ್ತಲೇ ಇದ್ದರು. ಪವನಶಕ್ತಿಯನ್ನು ಬಳಸಿಕೊಳ್ಳುವುದು ಸಾಧ್ಯವಿರಲಿಲ್ಲ, ಏಕೆಂದರೆ ಉಪ್ಪಿನ ತಯಾರಿಕೆಯ ಆರಂಭದ ಚಳಿಗಾಲದ ತಿಂಗಳುಗಳಲ್ಲಿ ಅಗತ್ಯವಾದಷ್ಟು ಪ್ರಮಾಣದಲ್ಲಿ ಗಾಳಿ ಬೀಸುವುದಿಲ್ಲ. ಸೌರಶಕ್ತಿಯನ್ನು ಬಳಸಿಕೊಳ್ಳುವ ಕುರಿತು ಸದಸ್ಯರು, ಸೇವಾಸಂಸ್ಥೆಯವರು ಸೇರಿ ತಜ್ಞರನ್ನು ಸಂಪರ್ಕಿಸಿದರು. ಕೊನೆಗೆ 2013ರಲ್ಲಿ ಹತ್ತು ಸದಸ್ಯರು ಪಂಪ್‌ಸೆಟ್‌ಗೆ ಸೋಲಾರ್ ಪ್ಯಾನೆಲ್ ಬಳಸಿಕೊಂಡು ಪೈಲಟ್ ಪ್ರಯೋಗ ಮಾಡಿದರು. ರಾತ್ರಿ ಮಾತ್ರ ಡೀಸೆಲ್ ಪಂಪ್ ಬಳಸಿದ್ದರಿಂದ ಉತ್ಪಾದನಾ ವೆಚ್ಚ ಗಣನೀಯವಾಗಿ ತಗ್ಗಿತು. ಮರುವರ್ಷ ಮತ್ತಷ್ಟು ಅಗರಿಯಾಗಳು ಸೋಲಾರ್ ಪಂಪ್‌ಸೆಟ್ ಅಳವಡಿಸಿಕೊಂಡರು. ಸ್ಪರ್ಧಾತ್ಮಕ ದರದಲ್ಲಿ ಸೋಲಾರ್ ಪಂಪ್‌ಗಳನ್ನು ಪೂರೈಸಲು ವ್ಯಾಪಾರಿಗಳು ಮುಂದಾದರು. ತದನಂತರ ಸೇವಾಸಂಸ್ಥೆಯು ರಾಜ್ಯ ಸರ್ಕಾರಕ್ಕೆ ಅಗರಿಯಾಗಳ ಬವಣೆಯನ್ನು ಮನವರಿಕೆ ಮಾಡಿಕೊಟ್ಟು, ಸೋಲಾರ್ ಪಂಪ್‌ಗಳಿಗೆ ಸಬ್ಸಿಡಿ ಕೊಡುವ ದಿಕ್ಕಿನಲ್ಲಿ ಚರ್ಚಿಸಿದರು. ನಂತರದ ಮೂರು ನಾಲ್ಕು ವರ್ಷಗಳವರೆಗೆ ಶೇ. 80 ಸಬ್ಸಿಡಿ ದೊರೆಯಿತು. ಸೇವಾದ ಸದಸ್ಯರು ಮಾತ್ರವಲ್ಲದೇ, ಬೇರೆ ಅಗರಿಯಾಗಳು ಕೂಡ ಸಬ್ಸಿಡಿಯ ಲಾಭ ಪಡೆದುಕೊಂಡರು. ಈಗ ಅನುದಾನದ ಕೊರತೆಯಿಂದಾಗಿ ಸಬ್ಸಿಡಿ ನಿಂತಿದೆ. ಆದರೆ ಸೋಲಾರ್ ಪಂಪ್ ಬಳಕೆಯಿಂದ ಉತ್ಪಾದನಾ ವೆಚ್ಚ ಅರ್ಧದಷ್ಟು ಕಡಿಮೆಯಾಗುವುದನ್ನು ಮನಗಂಡಿರುವ ಹೆಚ್ಚಿನವರು ತಮ್ಮ ಸ್ವಂತ ಖರ್ಚಿನಲ್ಲಿಯೇ ಸೋಲಾರ್ ಪಂಪ್ ಕೊಂಡುಕೊಂಡಿದ್ದಾರೆ.

ಕೈಗಾರಿಕಾ ಉಪ್ಪು ಉತ್ಪಾದಿಸುತ್ತಿರುವ ಸೇವಾದ ಸದಸ್ಯರ ಇಳುವರಿ ಹೆಚ್ಚಿದೆ, ಉಪ್ಪಿನ ಗುಣಮಟ್ಟ ಹೆಚ್ಚಿದೆ, ನ್ಯಾಯಯುತ ಬೆಲೆ ದಕ್ಕುತ್ತಿದೆ. ಸೋಲಾರ್ ಪಂಪಿನಿಂದಾಗಿ ಡೀಸೆಲ್ ಕೊಳ್ಳಲು ಮಾಡುತ್ತಿದ್ದ ವೆಚ್ಚ ತಗ್ಗಿದೆ. ಹೀಗಾಗಿ ಅಗರಿಯಾಗಳ ಜೀವನಮಟ್ಟ ಸಾಕಷ್ಟು ಉತ್ತಮಗೊಂಡಿದೆ.

## ಬೆಂಬಿಡದ ಆರೋಗ್ಯ ಸಮಸ್ಯೆಗಳು

ಎಂಟು ತಿಂಗಳು ರಣ್‌ನಲ್ಲಿಯೇ ಕಳೆಯುವ ಅಗರಿಯಾಗಳಿಗೆ ನಿರ್ಜಲೀಕರಣದಿಂದ ಉಂಟಾಗುವ ಆರೋಗ್ಯ ಸಮಸ್ಯೆಗಳು ಹೆಚ್ಚಾಗಿ ಬಾಧಿಸುತ್ತವೆ. ಸುಡುಬಿಸಿಲಿನಲ್ಲಿ ಕೆಲಸ ಮಾಡುವುದರಿಂದ ಕಣ್ಣಿನ ಸಮಸ್ಯೆಗಳು, ಹೈಪರ್‌ಟೆನ್ಷನ್, ಮೂತ್ರಪಿಂಡದಲ್ಲಿ ಕಲ್ಲುಗಳಾಗುವುದು ಸಾಮಾನ್ಯ. ಮೃತರ ದೇಹಗಳು ಚಿತೆಯಲ್ಲಿ ಬೇಗನೆ ಸುಡುವುದಿಲ್ಲ ಎನ್ನುತ್ತಾರೆ. ಉಪ್ಪಿನ ಅಂಶ ಮೂಳೆಗಳಲ್ಲಿ ಸಂಗ್ರಹಗೊಳ್ಳುವುದರಿಂದ, ಪೆಡಸಾದ ಮೂಳೆಗಳು ಬೇಗನೆ ಬೂದಿಯಾಗುವುದಿಲ್ಲ.

"ದೇಶ್ ರೇ ಜೋಯಾ ಪರದೇಶ್ ಜೋಯಾ,
ಜೋಯಾ ಅಗರಿಯಾ ಓನಾ ಪಾಟಾ,
ಮಾಯೀ ಮನೆ ಅಗರ್ ಮಾ ಸೀದ್ ದೀಧೀ"

ನೀನು ದೇಶ ನೋಡಿದವಳು, ಎಲ್ಲ ತಿಳಿದವಳು, ಆದರೆ ಅಮ್ಮಾ... ಅಗರಿಯಾಗೆ ಯಾಕೆ ನನ್ನ ಮದುವೆ ಮಾಡಿಕೊಟ್ಟೆ? – ಹೀಗೆ ಹಾಡುವ ಅಗರಿಯಾ ಮಹಿಳೆ ತನ್ನ ಹಾಡಿನಲ್ಲಿ ಮುಂದುವರೆದು ಹೇಳುತ್ತಾಳೆ: "ನಾನು ಹರೆಯದಲ್ಲಿಯೇ ಸಾಯಬಹುದು. ನನ್ನ ಅಂತ್ಯಸಂಸ್ಕಾರಕ್ಕೆ ಅವಸರಿಸಿ ಬರದಿರು, ಚಿತಾಗ್ನಿಯೊಳು ಮಾಂಸಮಜ್ಜೆಗಳು ಸುಟ್ಟು ಬೂದಿಯಾದರೂ ನನ್ನ ಮೂಳೆಗಳು ನಿನಗಾಗಿ ಕಾಯುತ್ತವೆ ಅಮ್ಮಾ..."

"ರಾತ್ರಿಯಾಗುತ್ತಿದ್ದಂತೆ ಕಾಲೆಲ್ಲ ಸೆಳೆತ, ಭಗಭಗ ಎಂದು ಉರಿಯಲು ಶುರುವಾಗುತ್ತೆ. ಅಂಗೈಯೆಲ್ಲ ಬಿರುಸಾಗಿ, ಉರಿಯುತ್ತೆ. ಹೆಣ್ಣುಮಕ್ಕಳ ಗೋಳಂತೂ ಕೇಳಲೇಬೇಡಿ" ಎನ್ನುತ್ತಾಳೆ ದುರ್ಗಾಬಾಯಿ. ರಣಕ್ಕೆ ಸಮೀಪವಿರುವ ಖಾರಾಗೋಡಾ ಹಳ್ಳಿಯ ದುರ್ಗಾಬಾಯಿ ಮದುವೆಯಾದಾಗಿನಿಂದಲೂ ಎಂಟು ತಿಂಗಳು ರಣ್‌ನಲ್ಲಿ ಉಪ್ಪಿನೊಂದಿಗೆ ಬದುಕು ಸವೆಸುತ್ತಿರುವವಳು. ಹೆಣ್ಣುಮಕ್ಕಳಿಗೆ ಋತುಸ್ರಾವದ ದಿನಗಳಲ್ಲಿ ನೈರ್ಮಲ್ಯವನ್ನು ಕಾಪಾಡಿಕೊಳ್ಳುವುದು ತೀರಾ ಕಷ್ಟ. ಸ್ಯಾನಿಟರಿ ಪ್ಯಾಡ್ ಬಳಸಿದರೆ, ಅವುಗಳ ವಿಲೇವಾರಿ ಕಷ್ಟ. ಹತ್ತಿಯ ಬಟ್ಟೆಗಳನ್ನು ಬಳಸುವುದು ಅನಿವಾರ್ಯ, ಆದರೆ ಅವುಗಳನ್ನು ತೊಳೆಯಲು ಸಾಕಷ್ಟು ನೀರೂ ಇರುವುದಿಲ್ಲ.

ಪ್ರತಿಯೊಬ್ಬರು ತಾವು ಲೀಸ್ ಪಡೆದ ಜಮೀನಿನಲ್ಲಿ ಜೋಪಡಿಯಿಂದ ಸ್ವಲ್ಪ ದೂರದಲ್ಲಿ ಒಂದೆರಡು ಗುಂಡಿಗಳನ್ನು ತೋಡಿಕೊಂಡಿರುತ್ತಾರೆ. ಶೌಚಕ್ಕೆ ಅಲ್ಲಿಯೇ ಹೋಗುತ್ತಾರೆ. ಬಟಾಬಯಲು ಪ್ರದೇಶವಾಗಿದ್ದರಿಂದ, ಶೌಚಕ್ಕೆ ಮರಗಿಡಗಳ ಮರೆಯೂ ಇರುವುದಿಲ್ಲ. ಹೀಗಾಗಿ ಹೆಣ್ಣುಮಕ್ಕಳು ರಾತ್ರಿ ವೇಳೆ ಮಾತ್ರವೇ ಶೌಚಕ್ಕೆ ಹೋಗುವುದನ್ನು ರೂಢಿ ಮಾಡಿಕೊಂಡಿರುತ್ತಾರೆ. ಆರೋಗ್ಯದಲ್ಲಿ ಏರುಪೇರಾದರೆ ತತ್‌ಕ್ಷಣಕ್ಕೆ ವೈದ್ಯಕೀಯ ಸೌಲಭ್ಯವೂ ದೊರೆಯುವುದಿಲ್ಲ. ಯಾವುದೇ ವೈದ್ಯಕೀಯ ಸೌಲಭ್ಯ ಬೇಕೆಂದರೂ ರಣ್‌ನಿಂದ 30–40 ಕಿ.ಮೀ. ದೂರದ ತಮ್ಮ ಹಳ್ಳಿಗಳಿಗೆ ಬರಬೇಕು.



ಮೊಬೈಲ್ ಶಾಲೆಯೊಳಗೆ ಉಪ್ಪಿನ ರೈತರ ಮಕ್ಕಳ ಕಲಿಕೆ



ಇಲ್ಲಿಂದ ಮುಂದೆಲ್ಲ ರಣ್...
ಫೋಟೊ: ಅಹ್ಮದ್ ಶೇಕ್

## ಒಂಬತ್ತು ರಾಜ್ಯಗಳು - ಸಹಸ್ರಾರು ಕೆಲಸಗಾರರು

ಉಪ್ಪಿನ ಉತ್ಪಾದನೆಯಲ್ಲಿ ಅಮೆರಿಕ ಹಾಗೂ ಚೀನಾ ನಂತರ ಮೂರನೇ ಸ್ಥಾನದಲ್ಲಿರುವ ಭಾರತ ಪ್ರತಿವರ್ಷ ಅಂದಾಜು 230 ಮಿಲಿಯನ್ ಟನ್ ಉಪ್ಪು ಉತ್ಪಾದಿಸುತ್ತದೆ. ಇದರಲ್ಲಿ ಶೇ. 95ರಷ್ಟನ್ನು ಖಾಸಗಿ ವಲಯದವರು ಉತ್ಪಾದಿಸುತ್ತಾರೆ. ಒಟ್ಟು ಉತ್ಪಾದನೆಯಲ್ಲಿ ಸಹಕಾರಿ ವಲಯವು ಸುಮಾರು ಶೇ. 8ರಷ್ಟನ್ನು ಉತ್ಪಾದಿಸಿದರೆ, ಸಣ್ಣ ಪ್ರಮಾಣದ ತಯಾರಕ ವಲಯ, ಅಂದರೆ 10 ಎಕರೆಗಿಂತ ಕಡಿಮೆ ಇರುವವರು ಶೇ. 40ರಷ್ಟನ್ನು ಉತ್ಪಾದಿಸುತ್ತಾರೆ.